ಮಾಡಿಕೊಳ್ಳುವುದೇನೆಂದರೆ, ಈ ಇಲಾಖೆಯವರು ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುವಾಗ ಕನಿಷ್ಟ ಒಂದು ಸೌಜನ್ಯತೆಗಾಗಿಯಾದರೂ ಅಲ್ಲಿಗೆ ಬಂದು, ಈ ಒಂದು ತಾಲ್ಲೂಕಿನಲ್ಲಿ ಏನು ಕಾರ್ಯಕ್ರಮ ಮಾಡಬೇಕೆಂದು ಕೆಲಸವನ್ನು ಮಾಡುವಂಥಾದ್ದನ್ನು ಮಾಡಬೇಕಾಗಿದೆ. ಮತ್ತು ತಾವು ಅನುಬಂಧದಲ್ಲಿ ಕೊಟ್ಟಿರುವ ಕೆಲಸಗಳ ಬಗ್ಗೆ ತನಿಖೆ ಆಗಬೇಕಾಗಿದೆ. ಇವತ್ತು ಹಾತೂರು ಪಿಕಪ್ ಡ್ಯಾಂಗೆ ಕಾಲುವೆಯ ನವೀಕರಣ ಮಾಡುವಂಥ ವಿಚಾರದಲ್ಲಿ ನಾಲ್ಕೈದು ಸಲ ಬಿಲ್ ಮಾಡಿದ್ದಾರೆ. ತಾವೇ ಈ ಮಾಹಿತಿಯನ್ನು ಒದಗಿಸಿದ್ದೀರಿ. ಈ ಒಂದು ವಿಚಾರದಲ್ಲಿ ಇದು ತನಿಖೆಯಾಗಬೇಕಾಗಿದೆ ಮತ್ತು ಅಧಿಕಾರಿಗಳೂ ಕೂಡ ನಮ್ಮ ಜತೆ ಸಹಕರಿಸುವಂತೆ ತಾವು ಸೂಚನೆಯನ್ನು ಕೂಡ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಈಗಾಗಲೇ ಹೇಳಿದ್ದೇನೆ, ಪ್ರಶ್ನೋತ್ತರ ವೇಳೆ ಮುಗಿದ ನಂತರ ನಾವು ಮಾತನಾಡೋಣ.

ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

333(4529) : ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿಗಾಗಿ ಮಂಜೂರಾಗಿರುವ 6 ಕೋಟಿ ರೂಪಾಯಿ ಯೋಜನೆಯ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು;

ಆ) ಈ ಕಾಮಗಾರಿಯು ವಿಳಂಬವಾಗಲು ಕಾರಣವೇನು?

ಇ) ಈ ಕಾಮಗಾರಿಯನ್ನು ಯಾವುದಾದರೂ ಸಂಸ್ಥೆಗೆ ವಹಿಸಲಾಗಿತ್ತೆ; ಹಾಗಿದ್ದಲ್ಲಿ ಕಾರ್ಯನಿರ್ವಹಣೆಯಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) ಹೌದು. ಟೆಂಡರ್ ಕರೆಯಲಾಗಿದೆ. ಡಿಸೆಂಬರ್ 2005 ರೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) ಯೋಜನೆಯಲ್ಲಿನ ಎಂ.ಎಸ್. ಕೊಳವೆಗಳ ಮತ್ತು ರಿ–ಇನ್‌ಫೋರ್ಸ್‌ಮೆಂಟ್ ಸ್ಟೀಲ್‌ಗಳ ದರಗಳು ಮಾರುಕಟ್ಟೆಯಲ್ಲಿ ತೀವ್ರವಾಗಿ ಹೆಚ್ಚಾಗಿರುವುದರಿಂದ ಗುತ್ತಿಗೆದಾರರು ಹೆಚ್ಚುವರಿ ದರ ನೀಡಲು ಕೋರಿ ಸದರಿ

ಕಾಮಗಾರಿಗಳನ್ನು ಸ್ಥಗಿತಗೊಳಿಸಿದ್ದರಿಂದ ವಿಳಂಬವಾಗಿರುತ್ತದೆ. ಹೆಚ್ಚುವರಿ ದರಗಳನ್ನು ಗುತ್ತಿಗೆ ಷರತ್ತಿನ ಪ್ರಕಾರ ಕೊಡಲು ಸಾಧ್ಯವಿರುವುದಿಲ್ಲ.

ಇ) ಸದರಿ ಯೋಜನೆಯಡಿಯಲ್ಲಿನ ಮೂಲ ಸ್ಥಾವರ ನಿರ್ಮಾಣ, ಕಚ್ಚಾ / ಶುದ್ಧ ನೀರು ಏರು ಕೊಳವೆ ಮಾರ್ಗ ಅಳವಡಿಸುವುದು, ಪಂಪ್ ಹೌಸ್ ನಿರ್ಮಿಸುವುದು ಮತ್ತು ಎರಡು ಸಂಖ್ಯೆ 10.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಿಸುವ ಕಾಮಗಾರಿಯನ್ನು ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ಮೆ: ಜಿ.ವಿ.ಪಿ.ಆರ್ ಇಂಜಿನಿಯರ್ಸ್ ಲಿಮಿಟೆಡ್, ಹೈದರಾಬಾದ್ ಇವರಿಗೆ ದಿನಾಂಕ: 20.10.2003ರಲ್ಲಿ ವಹಿಸಿ ಕೊಡಲಾಗಿದೆ.

ಕಾಮಗಾರಿ ಪ್ರಗತಿಯಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಯೋಜನೆಯಲ್ಲಿನ ಎಂ.ಎಸ್.ಕೊಳವೆಗಳ ಮತ್ತು ರಿ–ಇನ್‌ಫೋರ್ಸ್ ಮೆಂಟ್ ಸ್ಟೀಲ್‌ಗಳ ದರಗಳು ಮಾರುಕಟ್ಟೆಯಲ್ಲಿ ತೀವ್ರವಾಗಿ ಹೆಚ್ಚಾಗಿರುವುದರಿಂದ ಗುತ್ತಿಗೆದಾರರು ಹೆಚ್ಚುವರಿ ದರ ನೀಡಲು ಕೋರಿ ಸದರಿ ಕಾಮಗಾರಿಗಳನ್ನು ಸ್ಥಗಿತಗೊಳಿಸಿದ್ದರಿಂದ ಎಂ.ಎಸ್.ಕೊಳವೆಗಳ ಬದಲಾಗಿ ಡಿ.ಐ. ಪೈಪ್‌ಗಳನ್ನು ಮಂಡಳಿಯಿಂದ ಸರಬರಾಜು ಮಾಡಲು ದಿನಾಂಕ:8–4–2005 ರಂದು ನಡೆದ ಮಂಡಳಿಯ 199ನೆಯ ಸಭೆಯಲ್ಲಿ ತೀರ್ಮಾನಿಸಲಾಗಿದೆ ಅದರಂತೆ ಡಿ.ಐ. ಕೊಳವೆಗಳ ಸರಬರಾಜಿಗಾಗಿ ಮೆ. ಲ್ಯಾಂಕೋ ಇಂಡಸ್ಟ್ರೀಸ್ ಲಿಮಿಟೆಡ್, ಚೆನ್ನೈ ಇವರಿಗೆ ಆದೇಶಿಲಾಗಿದೆ. ಸದರಿ ಗುತ್ತಿಗೆದಾರರು ಉಳಿದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಪ್ರಗತಿಯಲ್ಲಿರುತ್ತದೆ.

ಶ್ರೀ ಪ್ರಕಾಶ್ ಖಂಡೆ: ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ. ಈ ಕುಡಿಯುವ ನೀರಿನ ಯೋಜನೆಯನ್ನು 2005ರ ಡಿಸೆಂಬರ್ ಒಳಗೆ ಮುಗಿಸುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ನಾನು ಮಾನ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ, ಈ ಯೋಜನೆಯಲ್ಲಿ ನದಿಗೆ ಬ್ಯಾರೇಜ್ ಕಟ್ಟಿ, ನದಿಯಲ್ಲಿ ನೀರು ನಿಲ್ಲಿಸುವ ಬಗ್ಗೆ ಏನೂ ಪ್ರಸ್ತಾಪವಿಲ್ಲ.

ಶ್ರೀ ಎಸ್.ಆರ್. ಮೋರೆ. (ಪೌರಾಡಳಿತ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ): 2005ರ ಡಿಸೆಂಬರ್‌ಗೆ ನೀರು ಸರಬರಾಜನ್ನು ಮಾಡುತ್ತೇವೆ. ಆದರೆ ಬೇಸಿಗೆಯಲ್ಲಿ ನೀರು ಕಡಿಮೆ ಬೀಳುವುದರಿಂದ ಕಾರಂಜಾ ಡ್ಯಾಂಗೆ ನಾವು

ವೆಂಟೆಡ್ ಡ್ಯಾಂ ಕಟ್ಟುತ್ತೇವೆ. ಬ್ಯಾರೇಜಿಗೆ ಸಂಬಂಧಿಸಿದಂತೆ, ಈಗಾಗಲೇ ಟೆಕ್ನಿಕಲ್ ವಿಷಯಗಳೆಲ್ಲಾ ಫೈನಲ್ ಆಗಿವೆ. ಅದನ್ನು ಟೆಂಡರ್ ಕರೆಯುತ್ತೇವೆ. ಆ ಕೆಲಸ ಆರಂಭ ಮಾಡುತ್ತೇವೆ. ಅಲ್ಲಿ ಬ್ಯಾರೇಜ್ ಕಟ್ಟುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ: ಬ್ಯಾರೇಜ್ ಕಟ್ಟುತ್ತೇವೆ ಎಂದು ಮಂತ್ರಿಗಳು ಇವತ್ತು ಹೇಳುತ್ತಿದ್ದಾರೆ. 6 ಕೋಟಿ 35 ಲಕ್ಷ ರೂಪಾಯಿಗಳ ಈ ಯೋಜನೆ 2003ರಲ್ಲಿ ಸ್ಯಾಂಕ್ಷನ್ ಆಗಿದೆ. ಅದಕ್ಕೆ ಈಗ ಟೆಂಡರ್‌ನ್ನು ಕರೆದಿದ್ದಾರೆ. ಆದರೆ ಇವತ್ತಿನ ತನಕ ಬ್ಯಾರೇಜ್‌ಗೆ ಟೆಂಡರ್ ಕರೆದಿಲ್ಲ, ಬ್ಯಾರೇಜ್ ಎಸ್ಟಿಮೇಟ್ ಮಾಡಿಲ್ಲ. ಇದಕ್ಕೆ ಕಾರಣವೇನು?

ಶ್ರೀ ಎಸ್.ಆರ್. ಮೋರೆ: ಬ್ಯಾರೇಜನ್ನು ಬೇಸಿಗೆಯಲ್ಲಿ ಕಟ್ಟಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಟೆಕ್ನಿಕಲ್ ರಿಪೋರ್ಟ್ ಎಲ್ಲಾ ಆಗಿದೆ. ಈ ವಾರವೇ ಟೆಂಡರ್ ಕರೆಯುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ: ಬೇಸಿಗೆಯಲ್ಲಿ ಕಟ್ಟಿ, ನಮ್ಮ ಅಭ್ಯಂತರವಿಲ್ಲ, ಆದರೆ 2003ರಲ್ಲೇ ನೀವು ಬ್ಯಾರೇಜಿಗೆ ಟೆಂಡರ್ ಕರೆಯಬೇಕಾಗಿತ್ತು. 2003ರಲ್ಲಿ ಈ ಯೋಜನೆಗೆ 6 ಕೋಟಿ 35 ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದು, ಇವತ್ತಿನವರೆಗೂ ಬ್ಯಾರೇಜ್ ಬಗ್ಗೆ ಎಸ್ಟಿಮೇಟ್ ಮಾಡಿಲ್ಲ, ಟೆಂಡರ್ ಮಾಡಿಲ್ಲ, ಇದಕ್ಕೆ ಕಾರಣವೇನು?

ಶ್ರೀ ಎಸ್.ಆರ್. ಮೋರೆ: 2003ರಲ್ಲಿ ಕೆಲಸ ಆರಂಭವಾಯಿತು. ನಾನು ಈ ಮೊದಲೇ ಉತ್ತರ ಕೊಟ್ಟ ಹಾಗೆ, ಈ ಯೋಜನೆಯಲ್ಲಿ ಮೊದಲು ಎಸ್ಕಲೇಷನ್ ಕ್ಲಾಸ್ ಇರಲಿಲ್ಲವಾದ್ದರಿಂದ, ಎಂ.ಎಸ್.ಪೈಪ್, ಇತ್ಯಾದಿಗಳ ರೇಟ್ ಜಾಸ್ತಿಯಾದ್ದರಿಂದ ಅವರು ಕೆಲಸ ನಿಲ್ಲಿಸಿಬಿಟ್ಟಿದ್ದರು. ಆದರೂ ಕೂಡ, ನಾವು ಅದನ್ನು ಬಿಡಲಿಲ್ಲ.....

ಶ್ರೀ ಪ್ರಕಾಶ್ ಖಂಡ್ರೆ: ಪೈಪ್ ಬಗ್ಗೆ ಓವರ್‌ಹೆಡ್ ಟ್ಯಾಂಕ್ ಬಗ್ಗೆ ಇತ್ಯಾದಿಗಳ ಬಗ್ಗೆ ನಾನು ಇಲ್ಲಿ ಏನೂ ಚಕಾರವೆತ್ತುತ್ತಿಲ್ಲ. ನಾನು ಏನು ಕೇಳುತ್ತಿದ್ದೇನೆಂದರೆ, ಈ ಬೇಸಿಗೆಯಲ್ಲಿ ಭಾಲ್ಕಿಯಲ್ಲಿ ಒಂದು ಹನಿ ನೀರೂ ಇರುವುದಿಲ್ಲ. ಜನರು ಪ್ರತಿದಿನ ಮುನಿಸಿಪಾಲಿಟಿ ಕಛೇರಿಗೆ ಕೀಲಿ ಹಾಕುತ್ತಿದ್ದಾರೆ. ಶಾಸಕರಾದ ನಾವು ನಮ್ಮ ಕ್ಷೇತ್ರಕ್ಕೆ ಹೋದರೆ ನಮ್ಮ ಮನೆಯ ಹತ್ತಿರ ಒಂದು ಸಾವಿರ ಜನ ಇರುತ್ತಾರೆ. ನಾರಂಜಾ ನದಿಗೆ ಉಸುಕಿನ ಚೀಲಗಳನ್ನು ಹಾಕಿ, ನೀರನ್ನು ನಿಲ್ಲಿಸಿ ಜನರಿಗೆ ಕುಡಿಯುವ ನೀರನ್ನು ಕೊಡುತ್ತಿದ್ದೀರಿ. ಈ ಯೋಜನೆ

2003ರಲ್ಲಿ ಸ್ಯಾಂಕ್ಷನ್ ಆಗಿದೆ. ಸ್ಯಾಂಕ್ಷನ್ ಆಗಿರುವುದರಲ್ಲಿ ಬ್ಯಾರೇಜ್ ಸಹಾ ಸೇರಿದೆ. ಆದರೆ ಇವತ್ತಿನವರೆಗೂ ಅದಕ್ಕೆ ಎಸ್ಟಿಮೇಟ್ ಆಗಿಲ್ಲ, ಟೆಂಡರ್ ಆಗಿಲ್ಲ, ಬ್ಯಾರೇಜ್ ಇಲ್ಲದೇ, ನೀವು ಯೋಜನೆಯನ್ನು ತಯಾರು ಮಾಡಿ, ದೊಡ್ಡ ದೊಡ್ಡ ಪೈಪುಗಳನ್ನು ಹಾಕಿ, ಮೋಟಾರ್ ಕೂಡಿಸಿ, ದೊಡ್ಡ ಟ್ಯಾಂಕ್ ಮಾಡಿಯೂ ಏನು ಉಪಯೋಗವಿದೆ?

ಶ್ರೀ ಎಸ್.ಆರ್. ಮೋರೆ: ನಾನು ಆಗಲೇ ಹೇಳಿದ ಹಾಗೆ, ಬ್ಯಾರೇಜಿಗೆ ಸಂಬಂಧಪಟ್ಟಂತೆ ಟೆಕ್ನಿಕಲಿ ಎಲ್ಲಾ ಮುಗಿದಿದೆ. ಅದಕ್ಕೇ ಈ ವಾರ ಟೆಂಡರ್ ಕರೆಯುತ್ತಾರೆ. ಟೆಂಡರ್ ಕರೆದು, ಈ ಕೆಲಸವನ್ನು ಬೇಗ ಆರಂಭ ಮಾಡುತ್ತೇವೆ. ಬೇಸಿಗೆಯಲ್ಲಿ ಅದನ್ನು ಮುಗಿಸಿಬಿಡುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ: ಡಿಸೆಂಬರ್ 2005ರೊಳಗೆ ಮುಗಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಡಿಸೆಂಬರ್ 2005ರೊಳಗೆ ಮುಗಿಸಲು ಹೇಗೆ ಸಾಧ್ಯ? ಈಗ ರೈನಿ ಸೀಸನ್ ಇದೆ. ರೈನಿಸೀಸನ್‌ನಲ್ಲಿ ಬ್ಯಾರೇಜ್ ಕಟ್ಟಲು ಆಗುವುದಿಲ್ಲವೆಂದು ನೀವೇ ಹೇಳಿದಿರಿ.

ಶ್ರೀ ಎಸ್.ಆರ್. ಮೋರೆ: ಈ ವಾರ ಟೆಂಡರ್ ಕರೆದು ಬ್ಯಾರೇಜ್ ಕಟ್ಟಲು ಶುರು ಮಾಡುತ್ತೇವೆ. ಬೇಸಿಗೆಯೊಳಗೆ ನಾವು ಅದನ್ನು ಮುಗಿಸಿಬಿಡುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ: ರೈನಿ ಸೀಸನ್‌ನಲ್ಲಿ ಬ್ಯಾರೇಜ್ ಕಟ್ಟಲು ಆಗುವುದಿಲ್ಲ ಎಂದು ನೀವೇ ಹೇಳುತ್ತಿದ್ದೀರಲ್ಲಾ.

ಶ್ರೀ ಎಸ್.ಆರ್. ಮೋರೆ: ಅಲ್ಲಿಯವರೆಗೆ ನಾವು ಉಸುಕಿನ ಚೀಲಗಳನ್ನು ಹಾಕಿ ನೀರು ಕೊಡುತ್ತೇವೆ.

ಶ್ರೀ ರಾಜೇಂದ್ರ ವರ್ಮಾ: ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಸಚಿವರು ಈ ಸದನದಲ್ಲಿ ಕರೆಕ್ಟಾಗಿ ಮಾಹಿತಿ ಕೊಡಬೇಕು. ನಮ್ಮ ದೇಶಕ್ಕೆ ಸ್ವಾಂತಂತ್ರ್ಯ ಸಿಕ್ಕಿ 57 ವರ್ಷವಾಯಿತು. ಆದರೆ, ಇವತ್ತಿಗೂ ಭಾಲ್ಕಿ ಪಟ್ಟಣದಲ್ಲಿ ಹೆಣ್ಣುಮಕ್ಕಳು, ಮಹಿಳೆಯರು ರಾತ್ರಿ 12 ಗಂಟೆಯವರೆಗೆ ಬೇರೆ ಬೇರೆ ಭಾಗಗಳಿಂದ ನೀರು ತರುವಂಥ ಪರಿಸ್ಥಿತಿ ಇದೆ. ಇಷ್ಟಾದರೂ ಸರ್ಕಾರ ಇದುವರೆಗೂ ಕುಡಿಯುವ ನೀರಿನ ಕೆಲಸ ಮಾಡಿಲ್ಲವೆಂದರೆ, ಅವರಿಗೆ ಇದರ ಬಗ್ಗೆ ಆಸಕ್ತಿಯಿಲ್ಲವೆಂದು ನಮಗೆ ಅರ್ಥವಾಗುತ್ತದೆ.

ಶ್ರೀ ಎಸ್.ಆರ್. ಮೋರೆ: ಈ ಯೋಜನೆಯಿಂದ ನೀರು ಸರಬರಾಜನ್ನು ಡಿಸೆಂಬರ್‌ನಲ್ಲಿ ಆರಂಭ ಮಾಡುತ್ತೇವೆ. ಆದರೂ ಕೂಡ ಬೇಸಗೆಯಲ್ಲಿ ವೆಂಟೆಡ್ ಡ್ಯಾಂಅನ್ನು ಮುಗಿಸುತ್ತೇವೆ. ಅದಕ್ಕೆ ಟೆಂಡರ್ ಕರೆದಿದ್ದೇವೆ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಮಂತ್ರಿಗಳಿಗೆ ಇದು ಏಕೆ ಗೊತ್ತಾಗುತ್ತಿಲ್ಲ. ಈಗಿನ ವ್ಯವಸ್ಥೆಯಲ್ಲಿ ನೀವು ಉಸುಕಿನ ಚೀಲಗಳನ್ನು ಹಾಕಿ ನೀರು ಕೊಡಿಸುತ್ತೀರಿ. ಆದರೆ ದೊಡ್ಡ ಪೈಪ್‌ಲೈನ್ ಹಾಕಿದ ನಂತರ ನದಿಯಲ್ಲಿ ನೀರೇ ಇಲ್ಲ ಎಂದರೆ ನೀವು ಹೇಗೆ ನೀರು ಕೊಡುತ್ತೀರಿ? ನಾನು ಕೇಳುತ್ತಿರುವುದು ಒಂದೇ ಪ್ರಶ್ನೆ. ಮೂರು ವರ್ಷಗಳಿಂದ ಬ್ಯಾರೇಜ್ ಏಕೆ ಮಾಡಿಲ್ಲ ಎನ್ನುವುದಷ್ಟೇ ನಮಗೆ ಬೇಕು.

ಶ್ರೀ ಎಸ್.ಆರ್. ಮೋರೆ: ಈಗ ಟೆಂಡರ್ ಕರೆದಿದ್ದೇವೆ. ಅದಕ್ಕೆ ಸಂಬಂಧಿಸಿದಂತೆ ಟೆಕ್ನಿಕಲಿ ಎಲ್ಲಾ ಮುಗಿದಿದೆ.

ಶ್ರೀ ಪ್ರಕಾಶ್ ಖಂಡ್ರೆ: ನಾನು ಏನು ಹೇಳುತ್ತೇನೆಂದರೆ ಇದರ ಹಿಂದೆ ಒಂದು ರಾಜಕೀಯ ಉದ್ದೇಶವಿದೆ, ರಾಜಕೀಯ ದುರುದ್ದೇಶದಿಂದ ಅಲ್ಲಿ ಬ್ಯಾರೇಜ್ ಮಾಡುತ್ತಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ರಾಜೇಂದ್ರ ವರ್ಮಾ: ಭಾಲ್ಕಿಗೆ ಸಂಬಂಧಪಟ್ಟಂತೆ ವಿಶೇಷವಾಗಿ ರಾಜಕೀಯ ನಡೆಯುತ್ತಿದೆ. ಕುಡಿಯುವ ನೀರಿನ ಸಲುವಾಗಿಯೂ ರಾಜಕೀಯ ಮಾಡಿದರೆ ಹೇಗೆ ಆಗುತ್ತದೆ?

ಶ್ರೀ ಎಸ್.ಆರ್.ಮೋರೆ: ಅಲ್ಲಿ ಕುಡಿಯುವ ನೀರು ನಿಲ್ಲಿಸುವುದಿಲ್ಲ. 2005ರ ಡಿಸೆಂಬರ್‌ಗೆ, ನಮ್ಮ ಟೈಂ ಷೆಡ್ಯೂಲ್ ಪ್ರಕಾರ ಅದನ್ನು ಮಾಡುತ್ತೇವೆ.

ಶ್ರೀ ರಾಜೇಂದ್ರ ವರ್ಮಾ: ಕಳೆದ 3–4 ವರ್ಷಗಳಿಂದ ಅಲ್ಲಿ ಕುಡಿಯುವ ನೀರು ಇಲ್ಲ. ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗುತ್ತಿಲ್ಲವೆಂದು ಹೇಳಿದರೆ ನಾವು ನಮ್ಮ ಕ್ಷೇತ್ರಗಳಲ್ಲಿ ಜನರ ಎದುರು ಹೇಗೆ ಮುಖವಿಟ್ಟುಕೊಂಡು ತಿರುಗಾಡಬೇಕು?

ಶ್ರೀ ಪ್ರಕಾಶ್ ಖಂಡ್ರೆ: ಯಾರದೋ ಹೊಲಕ್ಕೆ ನೀರು ಹೋಗುತ್ತದೆ ಎಂದು ಅಲ್ಲಿ ಬ್ಯಾರೇಜ್ ಮಾಡುತ್ತಿಲ್ಲ ಎಂದು ನಾನು ಈ ಸದನದಲ್ಲಿ ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ಈ ರೀತಿ ರಾಜಕೀಯ ದುರುದ್ದೇಶ ಇಟ್ಟುಕೊಂಡು ಯೋಜನೆಗಳನ್ನು ಮಾಡಿದರೆ ಆಗುವುದಿಲ್ಲ.

ಶ್ರೀ ಎಸ್.ಆರ್.ಮೋರೆ: ಇದರಲ್ಲಿ ಯಾವ ದುರುದ್ದೇಶವೂ ಇಲ್ಲ. ನಮ್ಮ ಶೆಡ್ಯೂಲ್ ಪ್ರಕಾರ ನಾವು ನೀರನ್ನು ಸಪ್ಲೈ ಮಾಡುತ್ತೇವೆ. ಆದರೂ ಕೂಡ ಬೇಸಿಗೆಯಲ್ಲಿ ನೀರು ಕಡಿಮೆಯಾಗಬಾರದು ಎನ್ನುವ ಉದ್ದೇಶದಿಂದ ವೆಂಟೆಡ್ ಡ್ಯಾಂಅನ್ನು ಕಟ್ಟುತ್ತೇವೆ. ಅದಕ್ಕೂ ಕೂಡ ಈ ವಾರ ಟೆಂಡರ್ ಕರೆಯುತ್ತಿದ್ದೇವೆ.

ಅಧ್ಯಕ್ಷರು: ಎಷ್ಟು ಸಾರಿ ನೀವು ಉಪ ಪ್ರಶ್ನೆಗಳನ್ನು ಕೇಳುವುದು? ಪ್ರಶ್ನೋತ್ತರ ಕಾಲದಲ್ಲಿ ನಿಮಗೆ ಇಷ್ಟ ಬಂದ ಹಾಗೆ ಕೇಳಲಿ ಆಗುವುದಿಲ್ಲ. ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಮುಂದಿನ ಪ್ರಶ್ನೆ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬರವರು.

ಶ್ರೀ ರಾಜೇಂದ್ರ ವರ್ಮಾ: ಮಂತ್ರಿಗಳಿಂದ ನಮಗೆ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಪ್ರಕಾಶ್ ಖಂಡ್ರೆ: ನಮಗೆ ಸ್ಪಷ್ಟವಾದಂಥ ಉತ್ತರ ಬೇಕು.

ಅಧ್ಯಕ್ಷರು: ಮಾನ್ಯ ಖಂಡ್ರೆಯವರೇ ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಮಾತ್ರ ತಮಗೆ ಅವಕಾಶವಿದೆ. ಆದರೆ ಇದು ಕುಡಿಯುವ ನೀರಿನ ಪ್ರಶ್ನೆ ಎಂದು ಇಷ್ಟು ಅವಕಾಶ ಕೊಟ್ಟರೂ ನೀವು ಮತ್ತೆ ಮತ್ತೆ ಹೀಗೆ ಕೇಳುತ್ತಿದ್ದರೆ ಹೇಗೆ?

ಶ್ರೀ ಪ್ರಕಾಶ್ ಖಂಡ್ರೆ: ಇಲ್ಲಿ ಉಪಪ್ರಶ್ನೆಯ ಮಾತು ಬರುವುದಿಲ್ಲ. ಕುಡಿಯುವ ನೀರಿನ ಯೋಜನೆಯನ್ನು ಮಾಡಬೇಕಾಗಿದೆ.

ಅಧ್ಯಕ್ಷರು: ಇದೇನೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಮಂತ್ರಿಗಳು ಸ್ಪಷ್ಟವಾದ ಉತ್ತರ ಕೊಟ್ಟಿದ್ದಾರೆ. ಅವರು ಏನು ಹೇಳಿದರೆಂದರೆ, ಹಿಂದೆಯೇ ವೆಂಟೆಡ್ ಡ್ಯಾಂ ಮಾಡಬೇಕಾಗಿತ್ತು. ಕಾರಣಾಂತರದಿಂದ ಅದು ನಿಂತು ಹೋಗಿದೆ. ಸ್ಟೀಲ್ ರೇಟ್ ಇತ್ಯಾದಿಗಳೆಲ್ಲವೂ ಎಸ್,ಆರ್. ರೇಟಿಗಿಂತ ಜಾಸ್ತಿಯಾದ ಮೇಲೆ, ನಮಗೆ ಹೊಸ ರೇಟನ್ನು ಕೊಡುವವರೆಗೆ ನಾವು ಕೆಲಸ ಮುಂದುವರೆಸುವುದಿಲ್ಲ ಎಂದು ಕೆಲಸ ನಿಲ್ಲಿಸಿದ್ದರು. ಅವರ ಜೊತೆಯಲ್ಲಿ ಮಾತುಕತೆ ಮಾಡಿ, ಈಗಾಗಲೇ ನಾವು ಅದನ್ನು ಬಗೆಹರಿಸಿದ್ದೇವೆ. ಈಗ ವೆಂಟೆಡ್ ಡ್ಯಾಂಗೆ ನಾವು ಟೆಂಡರ್ ಕಾಲ್–ಫಾರ್ ಮಾಡಿದ್ದೇವೆ. ಆ ಟೆಂಡರ್‌ನ್ನು ಫೈನಲೈಸ್ ಮಾಡಿ ಕಂಪ್ಲೀಟ್ ಆಗಿ ಪರ್ಮನೆಂಟ್ ಸ್ಟ್ರಕ್ಚರ್, ಬೇಸಗೆಯಲ್ಲೂ ಕೂಡ ನೀರು ನಿಲ್ಲಿಸತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಟೆಂಪೊರರಿಯಾಗಿ ಈಗ ಉಸುಕಿನ

ಚೀಲಗಳನ್ನು ಹಾಕಿ ನೀರು ನಿಲ್ಲಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ಮಳೆಗಾಲ ಮುಗಿದ ಮೇಲೆ, ಬೇಸಿಗೆ ಮುಗಿಯುವುದರೊಳಗಾಗಿ ನಾವು ತಕ್ಷಣ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಪುನಃ ನೀವು, ಅದರಲ್ಲಿ ದುರುದ್ದೇಶವಿದೆ ಎಂದರೆ ಹೇಗೆ? ಅದರಲ್ಲಿ ಯಾವ ದುರುದ್ದೇಶವೂ ಇಲ್ಲ. ಕುಡಿಯುವ ನೀರಿನ ವಿಚಾರದಲ್ಲಿ ಯಾರೂ ರಾಜಕೀಯ ಮಾಡುವ ಹಾಗಿಲ್ಲ ಅಥವಾ ಮತ್ಯಾವುದೇ ಉದ್ದೇಶದಿಂದ ಡೆವಲೆಪ್‌ಮೆಂಟ್ ವರ್ಕ್‌ಗಳ ಬಗ್ಗೆ ರಾಜಕೀಯ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ. ರಾಜಕೀಯ ಮಾಡುವುದು ಚುನಾವಣೆಯಲ್ಲಿ ಮಾತ್ರ. ಚುನಾವಣೆಯಲ್ಲಿ ಜನ ಯಾರಿಗೆ ಓಟು ಕೊಡುತ್ತಾರೋ ಅವರು ಇಲ್ಲಿಗೆ ಬರುತ್ತಾರೆಯೇ ಹೊರತಾಗಿ ಅಭಿವೃದ್ಧಿ ಕೆಲಸಗಳಲ್ಲಿ ಯಾರೂ ರಾಜಕೀಯ ಮಾಡಲು ಹೋಗುವುದೂ ಇಲ್ಲ, ನಾವು ಮಾಡುವುದೂ ಇಲ್ಲ. ಅವರು ಸ್ಪಷ್ಟವಾಗಿ ಹೇಳಿದ್ದಾರೆ. ತಾವೂ ಕೇಳಿದ್ದೀರಿ.

ಶ್ರೀ ಪ್ರಕಾಶ್ ಖಂಡ್ರೆ: ಆದರೆ ಇದಕ್ಕೆ ಟೋಟಲಿ ಟೆಂಡರ್ ಕರೆದಿಲ್ಲ, ಟೋಟಲಿ ಎಸ್ಟಿಮೇಟ್ ಮಾಡಿಲ್ಲ. ಹಾಗಾಗಿ ಟೆಂಡರ್ ಕರೆದ ಪ್ರಶ್ನೆ ಇಲ್ಲಿ ಬರುವುದಿಲ್ಲ. ಏಕೆಂದರೆ, ಕರೆದಿರುವ ಟೆಂಡರ್‌ನಲ್ಲಿ ಬ್ಯಾರೇಜ್ ಇಲ್ಲ. ಅದನ್ನು ನಾವು ಕೇಳುತ್ತಿದ್ದೇವೆ.

ಶ್ರೀ ಎಸ್.ಆರ್. ಮೋರೆ: ಮಾನ್ಯ ಅಧ್ಯಕ್ಷರೇ ಈ ವಾರವೇ ಟೆಂಡರ್ ಫೈನಲ್ ಮಾಡಿದ್ದಾರೆ. ನಾನು ಎಲ್ಲ ಡಾಕ್ಯುಮೆಂಟ್ಸ್ ನೋಡಿದ್ದೇನೆ. ಈ ವಾರ ಕರೆಯುತ್ತಿದ್ದಾರೆ.

ಅಧ್ಯಕ್ಷರು: ಈಗ ಈ ವಾರ ಟೆಂಡರ್ ಕರೆಯುತ್ತೇವೆ ಎಂದು ಮಂತ್ರಿಗಳು ಹೇಳುತ್ತಿದ್ದಾರೆ. ಖಂಡ್ರೆಯವರೇ, ನಂತರ ನೀವು ಅವರ ಹತ್ತಿರ ಹೋಗಿ ಮಾತನಾಡಿ.

ಅಧ್ಯಕ್ಷರು: ಮಾಧುಸ್ವಾಮಿಯವರೇ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಕೊನೆಯಲ್ಲಿ ಬರುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ನಿಮ್ಮ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ.

ಸಂತೇಮಾರನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಗಣಿ ಕೈಗಾರಿಕೆ

336(3849) ಶ್ರೀ ಧ್ರುವನಾರಾಯಣ್ .ಆರ್ (ಸಂತೇಮಾರನಹಳ್ಳಿ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?